ಅಣ್ಣನ ಕಾಲೇಜಿನಲ್ಲಿಯೇ ಓದುತ್ತಿದ್ದಳು. ಪ್ರತಿ ವರ್ಷ ನಡೆಯುತ್ತಿದ್ದ ಮಾರಿ ಜಾತ್ರೆಗೆ ತಾನು ಹೋಗಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದಾಗ ಆಕೆ ಅದನ್ನು ಚಿವುಟಿ ಹಾಕಿ ಬಿಡುತ್ತಿದ್ದಳು. 'ನೀನಿನ್ನೂ ಚಿಕ್ಕವಳು. ನಿನಗಿನ್ನೂ ಜಾತ್ರೆಯಲ್ಲಿ ಯಾವ ಕೆಟ್ಟ ಅನುಭವವೂ ಆಗಿಲ್ಲ. ಅಲ್ಲಿ ಬರೀ ಪುಂಡ ಪೋಕರಿಗಳೇ ತುಂಬಿರುತ್ತಾರೆ. ಅವರ ವರ್ತನೆ ಅಸಹ್ಯ ತರಿಸುತ್ತದೆ. ನಾನಂತೂ ಬರಲಾರೆ' ಎಂದು ಹೇಳಿ ನನ್ನ ಆಸೆಗೆ ತಣ್ಣೀರು ಎರಚುತ್ತಿದ್ದಳು. ಪುಂಡ ಪೋಕರಿಗಳೆಂದರೆ ಕತ್ತಿನಲ್ಲಿನ ಸರವನ್ನು ಕದಿಯುವವರು, ಜೇಬು ಕತ್ತರಿಸುವವರು, ಮಕ್ಕಳ ಕಳ್ಳರು ಎಂಬ ನನ್ನ ಊಹೆ ತಪ್ಪಾಯಿತು. ಅಂದರೆ ಕುಸುಮಾಳಿಗೂ ಕೂಡ ತನಗಾದಂತಹ ಅನುಭವವೇನಾದರೂ ಜಾತ್ರೆಯಲ್ಲಿ ಆಗಿತ್ತಾ? ಈ ದುಷ್ಟರು ಹೀಗೇಕೆ ಮಾಡುತ್ತಾರೆ? ಅದರಿಂದ ಅವರಿಗೆ ಅದೆಂಥ ಖುಷಿ ಸಿಗುತ್ತದೆ? ಅವರ ಮನೆಯಲ್ಲಿರುವ ಅಕ್ಕ, ತಂಗಿ, ಅಮ್ಮ ಕೂಡ ನಮ್ಮಂತೆಯೇ ಅಲ್ಲವೆ? ಆದರೂ ಕೂಡ ಹೀಗೇಕೆ ನಡೆದುಕೊಳ್ಳುತ್ತಾರೆ? ಎಂದೆಲ್ಲ ಯೋಚಿಸುತ್ತ ತಲೆಯೆಂಬುದು ಕೆಸರ ಗುಂಡಿಯಂತಾಯ್ತು.

'ಗಿರಿಜಾ, ನಿನಗೆ ಎಂದಾದರೂ ಹಾವಿನ ಕನಸು ಬಂದಿದ್ದುಂಟಾ?' ಎಂದು ಜಾಹ್ನವಿ ಪೀಠಿಕೆಯನ್ನು ಹಾಕಿದಾಗ, 'ಹೌದು ಜಾನು. ನಾನು ಆರನೆ ಕ್ಲಾಸಿನಲ್ಲಿದ್ದಾಗ ಪ್ರತೀ ದಿನ ಕಾಣಿಸಿಕೊಳ್ಳೋದು. ಅಪ್ಪ ಸುಬ್ರಹ್ಮಣ್ಯಕ್ಕೆ ಹೋಗಿ ಪೂಜೆ ಮಾಡಿಸಿದ ಮೇಲೆಯೇ ಕನಸು ಬರೋದು ನಿಂತಿದ್ದು'

'ಗಿರಿಜಾ ಆ ಹಾವು ನಿನ್ನ ಹತ್ತಿರ ಬರುತ್ತಿತ್ತಾ? ನಿನ್ನನ್ನ ಕಚ್ಚುತ್ತಿತ್ತಾ?' ಹತ್ತಿಯನ್ನು ಹಿಂಜಿದಂತೆ ತನಗೆ ಬರುವ ಕನಸಿಗೂ ಗಿರಿಜಾಳ ಕನಸಿಗೂ ಅವಳು ತಾಳೆ ಹಾಕ ಹತ್ತಿದಳು. 'ಇಲ್ಲಪ್ಪ ಅದು ಬೋನಿನಲ್ಲಿಯೇ ಇರೋದು. ನನ್ನ ಹತ್ತಿರ ಬರಲು ಹೇಗೆ ಸಾಧ್ಯ? ಬೋನಿಗೆ ಬೀಗ ಬೇರೆ ಹಾಕಿರೋದು'. ತನ್ನ ಕನಸಿಗೂ  ಗಿರಿಜಾಳ ಕನಸಿಗೂ ಅಜಗಜಾಂತರ ವ್ಯತ್ಯಾಸ ಎನ್ನಿಸಿತ್ತು. ನನ್ನ ಸ್ವಪ್ನದಲ್ಲಿ ಬರುವ ಆ ಕೆಂಡದಂತಹ ಸರ್ಪವನ್ನು ಬೋನಿಗೆ ಹೇಗೆ ಹಾಕುವುದು? ನನ್ನ ಕೈಕಾಲುಗಳಿಗೆ ಸಂಕೋಲೆ ಬಿದ್ದಿರುತ್ತವೆ. ನನ್ನ ಮೈ ಏರಿ ಕುಳಿತ ಅದರ ರೋಮದಂತಹ ಸಾವಿರಾರು ಕೈ ಕಾಲುಗಳನ್ನು ಕಟ್ಟಿ ಬಂಧಿಸುವುದಾದರೂ ಹೇಗೆ?

ಆ ರಾಕ್ಷಸನ ಹಸ್ತ ಸ್ಪರ್ಶಿಸಿದ ಭಾಗದ ಬಗ್ಗೆ ಅಸಹ್ಯವಾದ ಭಾವನೆ ಮೂಡುತ್ತಿದೆ. ಕಾಗೆ ಮುಟ್ಟಿದ ಪಿಂಡದಂತೆ, ನಾಯಿ ಮುಟ್ಟಿದ ಅಡುಗೆಯಂತೆ ಭಾಸವಾಗುತ್ತಿದೆ. ಆ ಭಾಗವನ್ನು ಕತ್ತರಿಸಿ ಎಸೆಯಬೇಕೆನ್ನಿಸುತ್ತದೆ. ನೀರೊಲೆಯಲ್ಲಿ ಉರಿಯುತ್ತಿರುವ ಕಟ್ಟಿಗೆಯನ್ನು ಹಿರಿದು ಆ ಭಾಗವನ್ನು ದಹಿಸಿ ಬಿಡಬೇಕೆನ್ನುವಷ್ಟು ರೋಷ ಉಕ್ಕುತ್ತದೆ. ತನ್ನದಲ್ಲದ ತಪ್ಪಿಗೆ ತನ್ನನ್ನೇಕೆ ಶಿಕ್ಷಿಸಿಕೊಳ್ಳಬೇಕು? ರಸ್ತೆಯ ಮಧ್ಯ ನಿಲ್ಲಿಸಿ ಸುಡಬೇಕು ಅಂಥವರನ್ನು. ಸಾರ್ವಜನಿಕವಾಗಿ ಗಲ್ಲಿಗೇರಿಸಬೇಕು. ತಾನು ಕ್ಷಣ ಕ್ಷಣವೂ ನೊಂದು ಬಿಡುವ ಒಂದೊಂದು ನಿಟ್ಟುಸಿರೂ ಆತನನ್ನು ಅರಸಿಕೊಂಡು ಹೋಗುವ ಹಾಗಿದ್ದರೆ? ಹಿಂದೆ ಋಷಿಮುನಿಗಳಿಗೆಲ್ಲ ಅಂತಹ ಶಕ್ತಿ ಇತ್ತೆಂದು ಕನ್ನಡ ಟೀಚರ್ ಹಿಂದೊಮ್ಮೆ ಹೇಳಿದ್ದರು. ನಮ್ಮಲ್ಲೂ ಅಂತಹ ಶಕ್ತಿ ಇದ್ದಿದ್ದರೆ? ಆ ಅನಾಮಿಕನನ್ನು ಪಿ.ಟಿ. ಮೇಸ್ಟ್ರು, ಗುರು ಮಾಮನಂತಹ ಕಿರಾತಕರನ್ನು ಕೇವಲ ಕ್ಷಣ ಮಾತ್ರದಲ್ಲೇ ದಹಿಸಬಹುದಿತ್ತು.

ತನಗಾದ ಕಹಿ ಅನುಭವವನ್ನು ಕುಸುಮಾಳ ಹತ್ತಿರ ಹೇಳಿಕೊಳ್ಳಬೇಕು. ಮನಸ್ಸು ಹಗುರಾಗುತ್ತದೆ. ಅವಳು ಗುಟ್ಟನ್ನು ರಟ್ಟು ಮಾಡುವವಳಲ್ಲ. ಆದರೆ ಒಂದು ವಾರದಿಂದ ಕುಸುಮಳ ಮನಗೆ ಬೀಗ ಬಿದ್ದಿದೆ. ಶಾಲೆಯಿಂದ ಬರುವಾಗ ಅವಳ ಮನೆಯನ್ನು ದಾಟಿಕೊಂಡೇ ಬರಬೇಕಿತ್ತು. ಸಂಜೆ ತೋಟದಲ್ಲಿ ಗಿಡಗಳಿಗೆ ನೀರು ಹನಿಸುತ್ತಲೋ, ಹೂ ಕೀಳುತ್ತಲೋ ನಿಂತಿರುತ್ತಿದ್ದ ಕುಸುಮಾ ತನ್ನೊಡನೆ ಗಂಟೆಗಟ್ಟಲೇ ಮಾತನಾಡುತ್ತಿದ್ದಳು. ಊರಿಗೆ ಹೋಗುವಾಗ ತನಗೆ ಹೇಳಿಯೇ ಹೋಗುತ್ತಿದ್ದವಳು ಹೀಗೇಕೆ ಮಾಡಿದಳು? ಆಕೆ ನೀರು ಹನಿಸುತ್ತಿದ್ದ ಗಿಡಗಳೆಲ್ಲ ಬಾಡಿದಂತೆ ಕಾಣುತ್ತಿದ್ದವು. ಅರಳಿದ ಹೂಗಳೆಲ್ಲ ಮುರುಟಿಕೊಂಡು ನೆಲಕ್ಕೆ ಬಿದ್ದು ಬಾಡಿ ಹೋಗಿದ್ದವು. ತನ್ನ ತುಮುಲವನ್ನು ಆಕೆಯೊಡನೆ ಹಂಚಿಕೊಳ್ಳಬೇಕೆಂದರೆ ಅವಳೇ ಇಲ್ಲ. ಅಲ್ಲಿಯೇ ಇದ್ದ ಕಟ್ಟೆಯ ಮೇಲೆ ಸದಾ ಮಲಗಿರುತ್ತಿದ್ದ ಆಕೆಯ ಮುದ್ದಿನ ನಾಯಿ ಮಾತ್ರ ತನ್ನ ಎಂದಿನ ಜಾಗದಲ್ಲಿ ಮಲಗಿತ್ತು.  ನಿರಾಸೆಯಿಂದ ಕಾಲೆಳೆಯುತ್ತ ಮನೆಯತ್ತ ನಡೆಯುವುದು ನಿತ್ಯದ ವಾಡಿಕೆಯಾಯಿತು.

ಅವಳು ಬರುವ ದಾರಿಯಲ್ಲಿನ ಮರಗಿಡಗಳೆಲ್ಲ ಮೈತುಂಬ ಕಾಯಿ ಹಣ್ಣುಗಳನ್ನು
ತುಂಬಿಕೊಂಡು
ತೊನೆದಾಡುತ್ತಿವೆ.
ಪಕ್ವಗೊಂಡ ಹಣ್ಣುಗಳು
ನೆಲ ಕಚ್ಚಿ ಪರಿಮಳವನ್ನು
ಹರಡಿ ತಮ್ಮ
ಇರುವಿಕೆಯನ್ನು ಸೂಸುತ್ತಿವೆ.
ಆದರೂ ಕೂಡ ಹಿಂದಿನಂತೆ
ಆಕೆಯ ಕಣ್ಣುಗಳು ಈಗ ಹೂ
ಹಣ್ಣು ಕಾಯಿಗಳನ್ನು ಅರಸುವುದಿಲ್ಲ.
ಚಿಲಿ ಪಿಲಿ ಎನ್ನುವ ಹಕ್ಕಿಗಳ ಉಲಿಗೆ
ಕಿವಿಗೊಡುವುದಿಲ್ಲ. ಮೈಯೆಲ್ಲ ಕಣ್ಣಾಗಿ
ಸಾಗುವ ಅವಳು ಹಿಂದೆಮುಂದೆ, ಅಕ್ಕಪಕ್ಕ
ಸರಿದು ಹೋಗುವವರ ಮೇಲೆ ನಿಗಾ
ಇಟ್ಟಿರುತ್ತಾಳೆ. ಆಕೆಯ ಕಿವಿಗಳು ಶರವೇಗದಲ್ಲಿ
ಸಾಗುವ ಸೈಕಲ್. ದ್ವಿಚಕ್ರ ವಾಹನಗಳ ಸದ್ದನ್ನು
ಆಲಿಸುತ್ತವೆ. ಬೆನ್ನಿಗೆ ಅಂಟಿಕೊಂಡಿರುತ್ತಿದ್ದ ಆಕೆಯ
ಪುಸ್ತಕದ ಚೀಲವೀಗ ಆಕೆಯ ಎದೆಯನ್ನು ತಬ್ಬಿ
ಹಿಡಿದಿರುತ್ತದೆ.  ತಾನು ಕಂಡ, ಕೇಳಿದ ಕಥೆಗಳಿಗೆ ಬಣ್ಣ
ಹಚ್ಚಿ ಜೀವ ತುಂಬುತ್ತಿದ್ದ ಗಿರಿಜಾ ಶಾಲೆಗೆ ಬೆನ್ನು
ತೋರಿಸಿದ್ದಾಳೆ. ತನಗಿಂತ ಎರಡರಷ್ಟು ವಯಸ್ಸಾದ ತನ್ನ
ಮಾವನನ್ನೇ ಆಕೆ ಮದುವೆಯಾಗಿದ್ದಾಳೆ. ಅವಳೂ ಕೂಡ
ನಾನೊಬ್ಬ ಅನನುಭವಿ ಎಂದುಕೊಂಡು ನನ್ನ ಹತ್ತಿರ ಏನನ್ನೂ
ಹೇಳಿಕೊಳ್ಳಲಿಲ್ಲ. ವಾರವಿಡೀ ಅವಳು ಶಾಲೆಗೆ ಬರದಿರುವ
ಕಾರಣವನ್ನು ಕೇಳಲು ಅವಳ ಮನೆಗೆ ಹೋದರೆ ಅವರ ಅಮ್ಮ
ಅವಳನ್ನು ಹೊರಗೆ ಬರದಂತೆ ತಡೆದದ್ದೇಕೆ?. ಕುಸುಮಾಳ ಸಾವಿಗೆ ಕಾರಣ
ಏನು, ಯಾರು ಎಂಬುದು ಒಂದೂ ಗೊತ್ತಿಲ್ಲ. ಗುರು ಮಾಮ ಕುಸುಮಾಳನ್ನು
ಅವರಮ್ಮನೊಡನೆ ದೊಡ್ಡಾಸ್ಪತ್ರೆಯಲ್ಲಿ ನೋಡಿದ್ದನಂತೆ. ಅದರ ಮಾರನೆಯ
ದಿನವೇ ಅವಳು ನೇಣು ಹಾಕಿಕೊಂಡದ್ದು. ಏಕೆ ಏನನ್ನೂ ಹೇಳದೆ ಕುಸುಮಾ
ನನ್ನಿಂದ ದೂರವಾದಳು? ಸದಾ 'ನೀನಿನ್ನೂ ಚಿಕ್ಕವಳು, ನಿನಗೇನೂ
ತಿಳಿಯುವುದಿಲ್ಲ' ಎನ್ನುತ್ತಿದ್ದಳು. ಆಕೆ ಬದುಕಿದ್ದರೆ ಹೇಳುತ್ತಿದ್ದೆ. 'ನೋಡು
ನನಗೂ ಆ ಕೆಟ್ಟ ಅನುಭವವಾಯಿತು. ನಾನೂ ದೊಡ್ಡವಳಾಗಿದ್ದೇನೆ. ನನಗೀಗ
ಎಲ್ಲವೂ ತಿಳಿಯುತ್ತದೆ' ಎಂದು. ಆದರೆ ಆಕೆ ಅವಕಾಶವನ್ನೇ ಕೊಡಲಿಲ್ಲ. ಈಗ
ಅವಳ ಮನೆಯ ಮುಂದೆ ಹಾಯ್ದು ಹೋಗಲು ಭಯವಾಗುತ್ತದೆ. ಆ
ಮನೆಗೀಗ ಬೀಗ ಬಿದ್ದಿದೆ. ಮನೆಯ ಸುತ್ತ ಮುತ್ತಲೂ ಪೊದೆ ಬೆಳೆದು ಗಂವ್
ಎನ್ನುತ್ತಿದೆ. ಆಕೆಯ ಮುದ್ದಿನ ನಾಯಿ ಈಗ ಬಿಡಾಡಿ ನಾಯಿಯಾಗಿದೆ.
ಕುಸುಮಾ, ಗಿರಿಜಾಗೆ ಅದೇನು ಅವಸರವಿತ್ತು ಮದುವೆಯಾಗಲು? ಅದೂ
ದಡಿಯನಂತಹ ತನ್ನ ಮಾವನ ಜೊತೆಗೆ? ಇಬ್ಬರೂ ಒಂದು ಪ್ರಶ್ನೆಯಾಗಿಯೇ
ಉಳಿದು ಹೋದರು.

ರಾತ್ರಿ ಅದೇ ಗಾಢಾಂಧಕಾರ. ನೀರವತೆ. ಕೆಂಡದಂತೆ ನಿಗಿ ನಿಗಿ ಹೊಳೆಯುವ ಸರ್ಪ. ಸಂಕೋಲೆ ಬಿದ್ದಂತಿರುವ ನಿಶ್ಚೇತನ ದೇಹ. ಈ ಹಿಂದೆ ಒಂದೇ ತಲೆಯಿದ್ದ ಸರ್ಪಕ್ಕೆ ಈಗ ಒಂದಕ್ಕಿಂತ ಹೆಚ್ಚು ತಲೆಗಳು ಮೂಡಿವೆ. ಆ ತಲೆಗಳು ಐದು ಹಸ್ತಗಳಂತೆ ಗೋಚರಿಸುತ್ತಿವೆ. ಒಂದೊಂದು ಹಸ್ತಕ್ಕೂ ಐದೈದು ಬೆರಳುಗಳು. ಆ ಹಸ್ತಗಳು ಒಂದೊಂದು ಮುಖವಾಡವನ್ನು ಹಾಕಿಕೊಂಡಿವೆ. ಆ ಸೈಕಲ್ ಮೇಲಿನ ರಾಕ್ಷಸ, ಪಿ.ಟಿ.ಮೇಸ್ಟ್ರು, ಗುರು ಮಾಮ. ಜಾತ್ರೆಯಲ್ಲಿನ ಪೋಕರಿಗಳು. ಇನ್ನೂ ಮಸುಕು ಮಸುಕಾದ ಮುಖಗಳು. ಒಂದರ ಹಿಂದೆ ಮತ್ತೊಂದು ಹುಟ್ಟಿಕೊಳ್ಳುತ್ತಲೇ ಇವೆ. ಒಂದು... ಎರಡು... ಮೂರು... ಹತ್ತು... ಇಪ್ಪತ್ತು... ನೂರು... ಸಾವಿರ... ಹತ್ತು ಸಾವಿರ... ಇಲ್ಲ ಎಣಿಸಲಾಗುತ್ತಿಲ್ಲ... ಹಸ್ತಗಳು ಅಪರಿಮಿತವಾಗುತ್ತಲೇ ಹೋಗುತ್ತಿವೆ.